# ಕರ್ನಾಟಕ ಸರ್ಕಾರ




# ಲೆಕ್ಕ ಪತ್ರ – ಒಂದು ವಿಹಂಗಮ ನೋಟ

## 2011-2012

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)
ಕರ್ನಾಟಕ, ಬೆಂಗಳೂರು

# ಕರ್ನಾಟಕ


Bidar
Gulbarga
Bijapur
Belgaum
Bagalkot
Raichur
Dharwad
Gadag
Koppal
Sirsi
Uttara Kannada
Haveri
Bellary
Davanagere
Chitradurga
Shimoga
Udupi
Chickmagalur
Tumkur
Chikkaballapura
Bangalore (Rural)
Bangalore (Urban)
Kolar
Hassan
Dakshina Kannada
Mandya
Ramanagara
Kodagu
Mysore
Chamarajanagar

ಕರ್ನಾಟಕ ಸರ್ಕಾರ

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ

# 2011-2012


ಪ್ರಧಾನ ಮಹಾಲೇಖಪಾಲರು

(ಲೆ ಮತ್ತು ಹ)

ಕರ್ನಾಟಕ, ಬೆಂಗಳೂರು

## ಪ್ರಸ್ತಾವನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾನಿಯಮಗಳು) ಅಧಿನಿಯಮ 1971ರ ಅಧಿಕಾರದನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯದ ವಿಧಾನಮಂಡಲದಲ್ಲಿ ಸಾದರ ಪಡಿಸುವ ಸಲುವಾಗಿ ತಯಾರಿಸಿ, ಪರೀಕ್ಷಿಸಲಾಗುವುದು. ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕಗಳು (ಅ) ಹಣಕಾಸು ಲೆಕ್ಕಗಳು ಮತ್ತು (ಆ) ಧನ ವಿನಿಯೋಗ ಲೆಕ್ಕಗಳನ್ನು ಒಳಗೊಂಡಿರುತ್ತದೆ.

ಹಣಕಾಸು ಲೆಕ್ಕಗಳು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಸಾರಾಂಶದ ವಿವರಣಾಪಟ್ಟಿಗಳನ್ನು ಒಳಗೊಂಡಿರುತ್ತದೆ. ಧನವಿನಿಯೋಗ ಲೆಕ್ಕಗಳು ರಾಜ್ಯ ವಿಧಾನಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ವೆಚ್ಚಗಳ ಮೊತ್ತವನ್ನು ದಾಖಲಿಸುತ್ತದೆ ಮತ್ತು ಅವಕಾಶ ಒದಗಿಸಿದ ಮೊತ್ತಗಳಿಗೂ ಮತ್ತು ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡುತ್ತದೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯದ ಹಣಕಾಸು ಲೆಕ್ಕ ಮತ್ತು ಧನ ವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು, ಧನವಿನಿಯೋಗ ಲೆಕ್ಕಗಳು, ರಾಜ್ಯದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ ಮತ್ತು ಲೆಕ್ಕ ಪತ್ರ–ಒಂದು ವಿಹಂಗಮ ನೋಟ–ಇವುಗಳ ಒಟ್ಟು ಓದುವಿಕೆಯು/ ಕರ್ನಾಟಕ ಸರ್ಕಾರದ ಹಣಕಾಸು ವಹಿವಾಟಿನ ವಿವಿಧ ಮುಖಗಳ ಪರಿಣಾಮಕಾರಿ ಗ್ರಹಿಕೆಗೆ ಸಹಾಯ ಮಾಡುತ್ತದೆ. "ಲೆಕ್ಕಪತ್ರ – ಒಂದು ವಿಹಂಗಮ ನೋಟ"ವು ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳಲ್ಲಿ ಬಿಂಬಿತವಾಗಿರುವಂತೆ ರಾಜ್ಯ ಸರ್ಕಾರದ ಚಟುವಟಿಕೆಗಳ ಒಂದು ಸ್ಥೂಲನೋಟವನ್ನು ನೀಡುತ್ತದೆ. ಈ ಮಾಹಿತಿಯನ್ನು ಸಂಕ್ಷಿಪ್ತ ವಿವರಣೆಗಳು, ಕೋಷ್ಟಕಗಳು ಮತ್ತು ನಕ್ಷೆಗಳ ಮೂಲಕ ವಿಶದಪಡಿಸಲಾಗಿದೆ.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ದಿಶೆಯಲ್ಲಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

**(ಎಸ್. ಪ್ರಭು)**
ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)
ಕರ್ನಾಟಕ

ಸ್ಥಳ : ಬೆಂಗಳೂರು
ದಿನಾಂಕ :

# ಪರಿವಿಡಿ


| ಅಧ್ಯಾಯ–1 | ಪಕ್ಷಿನೋಟ | ಪುಟ |
|---|---|---|
| 1.1 | ಪೀಠಿಕೆ | 1 |
| 1.2 | ಲೆಕ್ಕಗಳ ವಿನ್ಯಾಸ | 1 |
| 1.2.1 | ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ಇಡಲಾಗುತ್ತದೆ | 1 |
| 1.2.2 | ಲೆಕ್ಕಗಳ ಸಂಕಲನ | 2 |
| 1.3 | ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು | 3 |
| 1.3.1 | ಹಣಕಾಸು ಲೆಕ್ಕಗಳು | 3 |
| 1.3.2 | ಧನವಿನಿಯೋಗ ಲೆಕ್ಕಗಳು | 4 |
| 1.4 | ನಿಧಿಗಳ ಆಕರಗಳು ಮತ್ತು ಅನ್ವಯಗಳು | 5 |
| 1.4.1 | ಅರ್ಥೋಪಾಯ ಮುಂಗಡಗಳು | 5 |
| 1.4.2 | ನಿಧಿಗಳ ಹರಿವಿನ ವಿವರಣಾ ಪಟ್ಟಿ | 5 |
| 1.4.3 | ರೂಪಾಯಿ ಎಲ್ಲಿಂದ ಬಂತು | 7 |
| 1.4.4 | ರೂಪಾಯಿ ಎಲ್ಲಿಗೆ ಹೋಯಿತು | 7 |
| 1.5 | ಲೆಕ್ಕಗಳ ಮುಖ್ಯಾಂಶಗಳು | 8 |
| 1.6 | ಕೊರತೆ ಮತ್ತು ಹೆಚ್ಚಳಗಳು ಏನನ್ನು ಸೂಚಿಸುತ್ತವೆ ? | 9 |
| 1.6.1 | ರಾಜಸ್ವ ಹೆಚ್ಚಳ / ಕೊರತೆಗಳ ಪ್ರವೃತ್ತಿ | 10 |
| 1.6.2 | ವಿತ್ತೀಯ ಕೊರತೆಗಳ ಪ್ರವೃತ್ತಿ | 10 |
| 1.6.3 | ಸರ್ಕಾರದ ಲೆಕ್ಕಪತ್ರಗಳು | 11 |
| 1.6.4 | ಸಾಲದ ಮೊತ್ತಗಳಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ | 11 |
| **ಅಧ್ಯಾಯ–2** | **ಸ್ವೀಕೃತಿಗಳು** | |
| 2.1 | ಪೀಠಿಕೆ | 12 |
| 2.2 | ರಾಜಸ್ವ ಸ್ವೀಕೃತಿಗಳು | 12 |
| 2.2.1 | ರಾಜಸ್ವ ಸ್ವೀಕೃತಿಗಳ ಭಾಗಗಳು | 13 |
| 2.2.2 | ಆದಾಯದ ಪ್ರಮುಖ ಮೂಲಗಳು | 13 |
| 2.3 | ಸ್ವೀಕೃತಿಗಳ ಪ್ರವೃತ್ತಿ | 14 |
| 2.3.1 | ತೆರಿಗೆ ರಾಜಸ್ವದ ಭಾಗಗಳು | 15 |
| 2.4 | ರಾಜ್ಯದ ಸ್ವಂತ ತೆರಿಗೆ ಸಂಗ್ರಹದ ನಿರ್ವಹಣೆ | 15 |
| 2.5 | ತೆರಿಗೆ ಸಂಗ್ರಹದ ದಕ್ಷತೆ | 15 |
| 2.6 | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲಿನ ಪ್ರವೃತ್ತಿ | 16 |
| 2.7 | ಸಹಾಯಾನುದಾನ ಮತ್ತು ವಂತಿಗೆಗಳು | 16 |
| 2.8 | ಸಾರ್ವಜನಿಕ ಋಣ | 17 |
| **ಅಧ್ಯಾಯ–3** | **ವೆಚ್ಚಗಳು** | |
| 3.1 | ಪೀಠಿಕೆ | 18 |
| 3.2 | ರಾಜಸ್ವ ವೆಚ್ಚ | 18 |
| 3.2.1 | ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 18 |
| 3.2.2 | ರಾಜಸ್ವ ವೆಚ್ಚದ ಪ್ರವೃತ್ತಿ | 19 |
| 3.2.3 | ವೆಚ್ಚದ ಪ್ರಮುಖ ವಿಭಾಗಗಳು | 19 |
| 3.3 | ಬಂಡವಾಳ ವೆಚ್ಚ | 21 |
| 3.3.1 | ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ | 21 |
| 3.3.2 | ಬಂಡವಾಳ ವೆಚ್ಚದ ಪ್ರವೃತ್ತಿ | 21 |

# ಪರಿವಿಡಿ


| | | |
|---|---|---|
| **ಅಧ್ಯಾಯ–4** | **ಯೋಜನೆ ಮತ್ತು ಯೋಜನೇತರ ವೆಚ್ಚ** | |
| 4.1 | ವೆಚ್ಚದ ಹಂಚಿಕೆ | 22 |
| 4.2 | ಯೋಜನಾ ವೆಚ್ಚ | 22 |
| 4.2.1. | ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ | 23 |
| 4.3 | ಯೋಜನೇತರ ವೆಚ್ಚ | 23 |
| 4.4 | ಬದ್ಧ ವೆಚ್ಚ | 24 |
| **ಅಧ್ಯಾಯ–5** | **ಧನ ವಿನಿಯೋಗ ಲೆಕ್ಕಗಳು** | |
| 5.1 | ಧನ ವಿನಿಯೋಗ ಲೆಕ್ಕಗಳ ಸಾರಾಂಶ | 25 |
| 5.1.1 | ಉಳಿತಾಯ/ ಹೆಚ್ಚಳಗಳ ಅನುದಾನವಾರು ವಿವರಗಳು | 25 |
| 5.2 | ಉಳಿತಾಯ ಪ್ರವೃತ್ತಿ | 26 |
| 5.3 | ಗಣನಾರ್ಹ ಉಳಿತಾಯಗಳು | 28 |
| **ಅಧ್ಯಾಯ–6** | **ಆಸ್ತಿ ಮತ್ತು ಜವಾಬ್ದಾರಿಗಳು** | |
| 6.1 | ಆಸ್ತಿಗಳು | 31 |
| 6.2 | ಋಣ ಮತ್ತು ಜವಾಬ್ದಾರಿಗಳು | 31 |
| 6.2.1 | ರಾಜ್ಯ ಭವಿಷ್ಯ ನಿಧಿಗಳು | 32 |
| 6.2.2 | ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ | 32 |
| 6.2.3 | ಸಾದಿಲ್ವಾರು ನಿಧಿ | 33 |
| 6.3 | ಖಾತರಿಗಳು | 33 |
| 6.4 | ಬಾಹ್ಯ ಬೆಂಬಲಿತ ಯೋಜನೆಗಳು | 34 |
| **ಅಧ್ಯಾಯ–7** | **ಇತರೆ ವಿಷಯಗಳು** | |
| 7.1 | ಆಂತರಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು | 35 |
| 7.2 | ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು | 35 |
| 7.3 | ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ | 35 |
| 7.3.1 | ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ | 36 |
| 7.4 | ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು | 36 |
| 7.5 | ಲೆಕ್ಕಗಳ ಹೊಂದಾಣಿಕೆ | 36 |
| 7.6 | ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ | 36 |
| 7.6.1 | ಸರ್ವತ್ರಕ ಒಳಶೀರ್ಷಿಕೆ 800–ಇತರೆ ಸ್ವೀಕೃತಿಗಳು/ ಇತರೆ ವೆಚ್ಚಗಳಡಿ ಇಲಾಖಾ ಸ್ವೀಕೃತಿಗಳು ಮತ್ತು ವಿತರಣೆಗಳ ವರ್ಗೀಕರಣ | 37 |
| 7.7 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು | 37 |
| 7.8 | ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು | 37 |

# ಅಧ್ಯಾಯ – 1

## ಪಕ್ಷಿನೋಟ

### 1.1 ಪೀಠಿಕೆ

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ ಇವರು ಕರ್ನಾಟಕ ರಾಜ್ಯ ಸರ್ಕಾರದ ಸ್ವೀಕೃತಿ ಮತ್ತು ವಿತರಣೆಗಳ ಲೆಕ್ಕವನ್ನು ಸಂಕಲಿಸುತ್ತಾರೆ. ಈ ಸಂಕಲನವು, ಜಿಲ್ಲಾ ಖಜಾನೆಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳು, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳು, ಇತರ ಲೆಕ್ಕ ಸಲ್ಲಿಸುವ ಕಛೇರಿಗಳು ಸಲ್ಲಿಸಿದ ಲೆಕ್ಕಗಳು ಮತ್ತು ಭಾರತೀಯ ರಿಜರ್ವ್ ಬ್ಯಾಂಕ್, ನಾಗಪುರದ ಕೇಂದ್ರೀಯ ಲೆಕ್ಕ ವಿಭಾಗವು ನೀಡಿದ ಸೂಚನೆಗಳು ಮತ್ತು ಕರ್ನಾಟಕ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಆಧರಿಸಿದೆ. ಈ ಸಂಕನಲದ ನಂತರ ಪ್ರಧಾನ ಮಹಾಲೇಖಪಾಲರು, ಪ್ರತಿವರ್ಷ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಇವುಗಳನ್ನು ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ಲೆಕ್ಕ ಪರಿಶೋಧನೆ) ಇವರ ಲೆಕ್ಕ ಪರಿಶೋಧನೆ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ಧೃಡೀಕರಣದ ನಂತರ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗುವುದು.

### 1.2 ಲೆಕ್ಕಗಳ ವಿನ್ಯಾಸ

#### 1.2.1 ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ಇಡಲಾಗುತ್ತದೆ

| | |
|---|---|
| **ಭಾಗ – 1 : ಸಂಚಿತ ನಿಧಿ** | ರಾಜಸ್ವ ಮತ್ತು ಬಂಡವಾಳ ಲೆಕ್ಕದ ಸ್ವೀಕೃತಿಗಳು ಮತ್ತು ವೆಚ್ಚ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳು ಮತ್ತು ಅಂತರರಾಜ್ಯ ಅಮಾನತ್ತು ಲೆಕ್ಕಗಳು. |
| **ಭಾಗ – 2 : ಸಾದಿಲ್ವಾರು ನಿಧಿ :** | ಆಯವ್ಯಯದಲ್ಲಿ ಅವಕಾಶವಿಲ್ಲದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸ್ಥಾಪಿಸಲಾಗಿದೆ. ಈ ನಿಧಿಯಿಂದ ಮಾಡಿದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಋಣ ವರ್ಗಾವಣೆಯ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ಹೊಸ ಋಣದ ಮೂಲಕ ಪುನರ್ಭರ್ತಿ ಮಾಡಲಾಗುವುದು |
| **ಭಾಗ – 3 : ಸಾರ್ವಜನಿಕ ಲೆಕ್ಕ :** | ಇದು ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು ಮತ್ತು ಮುಂಗಡಗಳು ಮತ್ತು ಇರಸಾಲು ವಹಿವಾಟುಗಳನ್ನು ಒಳಗೊಂಡಿದೆ. ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿ, ಮೀಸಲು ನಿಧಿ ಮತ್ತು ಠೇವಣಿಗಳು ಸರ್ಕಾರದ ಪುನರ್ಪಾವತಿಯ ಜವಾಬ್ದಾರಿಗಳಾದರೆ ಮುಂಗಡಗಳು ಸರ್ಕಾರಕ್ಕೆ ಜಮೆಯಾಗಬೇಕಾದುದನ್ನು ಸೂಚಿಸುತ್ತವೆ. ಅಮಾನತ್ತು ಮತ್ತು ಇರಸಾಲು ವಹಿವಾಟುಗಳು ಹೊಂದಾಣಿಕೆಯ ನಮೂದುಗಳಾಗಿದ್ದು ಅವುಗಳನ್ನು ಅಂತಿಮ ಲೆಕ್ಕ ಶೀರ್ಷಿಕೆಗೆ ಲೆಕ್ಕ ಮಾಡಿ ಚುಕ್ತಗೊಳಿಸಬೇಕಾಗುತ್ತದೆ. |

## 1.2.2 ಲೆಕ್ಕಗಳ ಸಂಕಲನ

### ಲೆಕ್ಕಗಳ ಸಂಕಲನದ ಹರಿವಿನ ನಕ್ಷೆ :

ವಿವಿಧ ಇಲಾಖೆಗಳ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳೂ ಸೇರಿದಂತೆ ಖಜಾನೆಗಳಿಗೆ ಬಿಲ್ಲುಗಳನ್ನು ಸಲ್ಲಿಸುತ್ತಾರೆ. ಮತ್ತು ಚಲನ್‌ಗಳ ಮೂಲಕ ಇರಸಾಲುಗಳನ್ನು ಮಾಡುತ್ತಾರೆ.

ಖಜಾನೆಗಳು ವೋಚರ್‌ಗಳನ್ನು, ಷೆಡ್ಯೂಲ್‌ಗಳನ್ನು ಚಲನ್‌ಗಳೊಂದಿಗೆ ಪ್ರಾಥಮಿಕ ಲೆಕ್ಕಗಳನ್ನು ಸಂಕಲಿಸಿ ಪ್ರಧಾನ ಮಹಾಲೇಖಪಾಲರಿಗೆ (ಲೆಕ್ಕ ಮತ್ತು ಹಕ್ಕುದಾರಿ) ಮಾಸಿಕ ಲೆಕ್ಕಗಳನ್ನು ಸಲ್ಲಿಸುತ್ತಾರೆ.

ಬಟವಾಡೆ ಅಧಿಕಾರಿಗಳು ಇಲಾಖಾ ಸ್ವೀಕೃತಿ ಮತ್ತು ವೆಚ್ಚಗಳನ್ನು ಖಜಾನೆಯು ಸಂಕಲಿಸಿದ ಪ್ರಾಥಮಿಕ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಲು ಜವಾಬ್ದಾರರಾಗಿರುತ್ತಾರೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕಛೇರಿಯು ಖಜಾನೆಗಳಿಂದ ರಾಜ್ಯ ಸರ್ಕಾರದ ಇಲಾಖಾ ವಹಿವಾಟುಗಳ ಪ್ರಾಥಮಿಕ ಲೆಕ್ಕಗಳನ್ನು, ನಾಗಪುರದ ಭಾರತೀಯ ರಿಜರ್ವ್ ಬ್ಯಾಂಕಿನ ಕೇಂದ್ರಿಯ ಲೆಕ್ಕ ವಿಭಾಗದಿಂದ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಕೇಂದ್ರದ ವಹಿವಾಟುಗಳಿಗೆ ಸಂಬಂಧಿಸಿದ ಸೂಚನಾ ಮೆಮೋಗಳನ್ನು, ಇತರೆ ಲೆಕ್ಕ ಸಲ್ಲಿಸುವ ಕಛೇರಿಗಳಿಂದ, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳಿಂದ ಸಂಕಲಿಸಿದ ಲೆಕ್ಕಗಳನ್ನು ಮತ್ತು ವಾರ್ಷಿಕ / ಕಾಲಕಾಲದ ಅಂತರ ಲೆಕ್ಕ ಹೊಂದಾಣಿಕೆಯನ್ನು ಒಳಗೊಂಡ ಸರ್ಕಾರಿ ಆದೇಶಗಳನ್ನು ಸ್ವೀಕರಿಸುತ್ತದೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕಛೇರಿಯ ವಿಎಲ್‌ಸಿ ಕಾರ್ಯ ಕೇಂದ್ರದಲ್ಲಿ ಮಾಸಿಕ ಸಿವಿಲ್ ಲೆಕ್ಕಗಳು, ವಾರ್ಷಿಕ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳ ತಯಾರಿಕೆಗೆ ವರ್ಗೀಕೃತ ಲೆಕ್ಕಗಳನ್ನು ತಯಾರಿಸುತ್ತಾರೆ.

## 1.3 ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು

### 1.3.1 ಹಣಕಾಸು ಲೆಕ್ಕಗಳು

ಹಣಕಾಸು ಲೆಕ್ಕಗಳು ಸರ್ಕಾರದ ಆಯಾ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳನ್ನಲ್ಲದೆ, ಲೆಕ್ಕಗಳಲ್ಲಿ ದಾಖಲಿಸಲಾದ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು, ಸಾರ್ವಜನಿಕ ಋಣ ಮತ್ತು ಸಾರ್ವಜನಿಕ ಲೆಕ್ಕಗಳ ಶಿಲ್ಕುಗಳು ತೋರಿಸುವ ಆರ್ಥಿಕ ಪರಿಣಾಮಗಳನ್ನು ಸಹ ಬಿಂಬಿಸುತ್ತವೆ. ಹೊಸ ಮಾದರಿಯ ಹಣಕಾಸು ಲೆಕ್ಕಗಳು ಎರಡು ಸಂಪುಟಗಳನ್ನು ಹೊಂದಿದ್ದು, ಹೆಚ್ಚು ವ್ಯಾಪಕ ಮತ್ತು ಬೋಧಪ್ರದವಾಗಿದೆ. ಸಂಪುಟ–1ರಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಧೃಢೀಕರಣ ಪತ್ರ, ಒಟ್ಟಾರೆ ಸ್ವೀಕೃತಿಗಳು ಮತ್ತು ವಿತರಣೆಗಳು, ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳು ಮತ್ತು ಲೆಕ್ಕಗಳ ಟಿಪ್ಪಣಿಗಳಲ್ಲಿ ಒಳಗೊಂಡಿರುವ ಗಣನೀಯ ಲೆಕ್ಕಕಾರ್ಯ ನೀತಿಗಳು, ಲೆಕ್ಕಗಳ ಗುಣಮಟ್ಟವನ್ನು ನಿರ್ಧರಿಸುವ ನಿಧಿ, ಅಮಾನತ್ತು ಮತ್ತು ಇತರ ಪುಸ್ತಕ ಹೊಂದಾಣಿಕೆಗಳು ಮುಂತಾದ ಕೆಲವು ರೀತಿಯ ವಹಿವಾಟುಗಳು ಮತ್ತು ಇತರೆ ಬಾಬತುಗಳನ್ನು ಒಳಗೊಂಡಿದ್ದರೆ, ಸಂಪುಟ–2 ಇತರ ಸಂಕ್ಷಿಪ್ತ ವಿವರಣಾ ಪಟ್ಟಿಗಳು (ಭಾಗ–1), ಸವಿವರ ವಿವರಣಾ ಪಟ್ಟಿಗಳು (ಭಾಗ–2) ಮತ್ತು ಅನುಬಂಧಗಳನ್ನು (ಭಾಗ–3) ಒಳಗೊಂಡಿದೆ.

2011–12ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕರ್ನಾಟಕ ಸರ್ಕಾರದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | | | |
|---|---|---|---|
| ಸ್ವೀಕೃತಿಗಳು (ಒಟ್ಟು : ₹ 82,436) | ರಾಜಸ್ವ (ಒಟ್ಟು ₹ 69,806) | ರಾಜ್ಯದ ಸ್ವಂತ ತೆರಿಗೆ ರಾಜಸ್ವ | 46,476 |
| | | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 11,075 |
| | | ತೆರಿಗೆಯೇತರ ರಾಜಸ್ವ | 4,087 |
| | | ಸಹಾಯಾನುದಾನ ಮತ್ತು ವಂತಿಗೆಗಳು($) | 8,168 |
| | ಬಂಡವಾಳ (ಒಟ್ಟು ₹ 12,630) | ಸಾಲ ಮತ್ತು ಮುಂಗಡಗಳ ವಸೂಲಾತಿ | 241 |
| | | ಇತರೆ ಸ್ವೀಕೃತಿಗಳು (ಇತರೆ ಬಂಡವಾಳ ಸ್ವೀಕೃತಿಗಳು) | 89 |
| | | ಸಾಲಗಳು ಮತ್ತು ಇತರ ಜವಾಬ್ದಾರಿಗಳು(*) | 12,470 |
| ವಿತರಣೆಗಳು (ಒಟ್ಟು : ₹ 82,436) | ರಾಜಸ್ವ (A) | | 65,115 |
| | ಬಂಡವಾಳ | | 15,506 |
| | ಸಾಲಗಳು ಮತ್ತು ಮುಂಗಡಗಳು | | 1,815 |

(*) (I) ಸಾರ್ವಜನಿಕ ಋಣ {₹ **6,038** ಕೋಟಿ}; (ii) ಸಾದಿಲ್ವಾರು ನಿಧಿ {₹ **12** ಕೋಟಿ}; (iii) ಸಾರ್ವಜನಿಕ ಲೆಕ್ಕ {₹ **6,910** ಕೋಟಿ} ಮತ್ತು (iv) ನಗದು ಶಿಲ್ಕು {₹ (-) **660** ಕೋಟಿ}ಗಳ ನಿವ್ವಳ ಕೊಡುಗೆಯನ್ನು ಒಳಗೊಂಡಿದೆ.

₹170 ಕೋಟಿ (ತೆರಿಗೆಯೇತರ ರಾಜಸ್ವ ಎಂಬುದಾಗಿ ಪರಿಗಣಿಸಿದ) ಕೇಂದ್ರ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಕೇಂದ್ರ ಸಾಲಗಳು ಹಾಗೂ ಹದಿಮೂರನೆ ಹಣಕಾಸು ಆಯೋಗದ (XIII ಹಣಕಾಸು ಆಯೋಗ) ಶಿಫಾರಸಿನಂತೆ ಹಣಕಾಸು ಮಂತ್ರಾಲಯವಲ್ಲದೆ, ಇತರ ಮಂತ್ರಾಲಯಗಳು ಕೇಂದ್ರ ಪುರಸ್ಕೃತ ಯೋಜನೆಗಳ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ನೀಡಿರುವ ಮುಂಗಡಗಳ ಪೈಕಿ ಉಳಿದಿರುವುದನ್ನು ದಾಖಲೆಗಳಿಂದ ತೆಗೆದುಹಾಕಲಾಗಿರುವ ಮೊತ್ತವನ್ನು ಒಳಗೊಂಡಿದೆ. ವಿತ್ತೀಯ ಸೂಚಕಗಳು, ಅವೆಂದರೆ ರಾಜಸ್ವ ಮಿಗುತಾಯ, ವಿತ್ತೀಯ ಕೊರತೆ, ಇವುಗಳನ್ನು ಲೆಕ್ಕ ಹಾಕಲು ಮೇಲೆ ತಿಳಿಸಿದ ಮೊತ್ತವನ್ನು ಪರಿಗಣಿಸಿಲ್ಲ. ಆದರೆ, ರಾಜಸ್ವ ಸ್ವೀಕೃತಿಗಳು ಹಾಗೂ ತೆರಿಗೆಯೇತರ ರಾಜಸ್ವ ಸ್ವೀಕೃತಿಗಳಲ್ಲಿ ಈ ಮೊತ್ತವನ್ನು ಪರಿಗಣಿಸಲಾಗಿದೆ.

($) ರಾಜ್ಯ ಆಯವ್ಯಯದ ಮೂಲಕ ದೊರೆಯುವ ಸಹಾಯಾನುದಾನಗಳು ಮತ್ತು ವಂತಿಗೆಗಳನ್ನು ಹೊರತುಪಡಿಸಿ ಕೇಂದ್ರ ಸರ್ಕಾರವು ವಿವಿಧ ಕೇಂದ್ರ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜ್ಯ ಅನುಷ್ಠಾನಾಧಿಕಾರಿಗಳಿಗೆ / ಸರ್ಕಾರೇತರ ಸಂಘಗಳಿಗೆ ಸಾಕಷ್ಟು ಮೊತ್ತಗಳನ್ನು ನೇರವಾಗಿ ವರ್ಗಾಯಿಸುತ್ತದೆ. 2010–11ರಲ್ಲಿನ ₹ 5,947 ಕೋಟಿ ಮತ್ತು 2009–10ರಲ್ಲಿನ ₹ 6,271 ಕೋಟಿಗಳಿಗೆ ಪ್ರತಿಯಾಗಿ 2011–12ರಲ್ಲಿ ಕೇಂದ್ರ ಸರ್ಕಾರವು ₹ 5,469 ಕೋಟಿಗಳನ್ನು ನೇರವಾಗಿ ಬಿಡುಗಡೆಮಾಡಿದೆ. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿದ್ದರೂ ಕರ್ನಾಟಕ ಸರ್ಕಾರದ ಪರಿಧಿಗೆ ಒಳಪಡದ ಕೇಂದ್ರಿಯ ಸಂಸ್ಥೆಗಳು ಹಾಗೂ ವಿವಿಧ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ 2011–12ರ ₹ 1,671 ಕೋಟಿ, 2010–11ರ ₹ 1395 ಕೋಟಿ ಹಾಗೂ 2009–10ರ ₹ 1324 ಕೋಟಿಗಳನ್ನು ಹೊರತು ಪಡಿಸಿದೆ.

(A) ಬಂಡವಾಳ ಆಸ್ತಿಗಳ ಸೃಜನೆಗೆ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ ₹ 2498 ಕೋಟಿಗಳನ್ನು ಒಳಗೊಂಡಿದೆ. (ಹಣಕಾಸು ಲೆಕ್ಕಗಳ ಸಂಪುಟ 2ರ ಸಂಕ್ಷಿಪ್ತ ವಿವರಣಾ ಪಟ್ಟಿ–8ನ್ನು ನೋಡಿ) (ಯೋಜನಾವಾರು ವಿವರಗಳನ್ನು ಹಣಕಾಸು ಲೆಕ್ಕಗಳ ಸಂಪುಟ 2ರಲ್ಲಿನ ಅನುಬಂಧ 7ರಲ್ಲಿ ನೀಡಲಾಗಿದೆ.)

### 1.3.2. ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಹಣಕಾಸು ಲೆಕ್ಕಗಳಿಗೆ ಪೂರಕವಾಗಿದ್ದು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ಒಟ್ಟು ವೆಚ್ಚವನ್ನು ದಾಖಲಿಸಿ ಅವಕಾಶ ಒದಗಿಸಿದ್ದ ಮೊತ್ತಗಳಿಗೂ ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಕ್ಕೆ ವಿವರಣೆಗಳನ್ನು ನೀಡುತ್ತದೆ. ಒಟ್ಟು 28 ಪುರಸ್ಕೃತ ಅನುದಾನಗಳು ಮತ್ತು ಒಂದು ಪ್ರಭೃತ ವಿನಿಯೋಗವು ಇದೆ.

2011–12ರ ಧನವಿನಿಯೋಗ ಅಧಿನಿಯಮವು ಪ್ರಸಕ್ತ ವರ್ಷದಲ್ಲಿ ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ₹12,007 ಕೋಟಿಗಳ ಪೂರಕ ಅನುದಾನವೂ ಸೇರಿದಂತೆ ₹99,745 ಕೋಟಿಗಳ ಒಟ್ಟು ವೆಚ್ಚವನ್ನು ಪ್ರಕ್ಷೇಪಿಸಿತ್ತು. ₹4,514 ಕೋಟಿಗಳ ಮೊತ್ತವನ್ನು ವೆಚ್ಚದಲ್ಲಿ ಕಡಿಮೆಯೆಂದು ಪರಿಗಣಿಸಬೇಕಾದ ವಸೂಲಿಯ ಮೊತ್ತವಾಗಿ ಪ್ರಕ್ಷೇಪಿಸಲಾಗಿತ್ತು.

2011–12ರ ಧನವಿನಿಯೋಗ ಲೆಕ್ಕಗಳು ಒಟ್ಟಾರೆ ಆಯವ್ಯಯ ಅಂದಾಜು ₹99,745 ಕೋಟಿಗಳಿಗೆ ಪ್ರತಿಯಾಗಿ ₹86,830 ಕೋಟಿಗಳ ವೆಚ್ಚವನ್ನು ತೋರಿಸಿದ್ದು, ₹12,915 ಕೋಟಿಗಳ ನಿವ್ವಳ ಉಳಿತಾಯವಾಗಿದೆ. ವೆಚ್ಚದಲ್ಲಿ ಕಡಿತವೆಂದು ತೋರಿಸುವ ವಸೂಲಾತಿಯ ಮೊತ್ತವು ₹1,073 ಕೋಟಿಗಳಷ್ಟಿದ್ದು ಆಯವ್ಯಯ ಅಂದಾಜಿನ ಮೊತ್ತಕ್ಕಿಂತಲೂ ₹3,441 ಕೋಟಿಯಷ್ಟು ಕಡಿಮೆಯಾಗಿದೆ.

ಒಟ್ಟು ವೆಚ್ಚದ ಮೊತ್ತವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹97 ಕೋಟಿಗಳನ್ನು ಒಳಗೊಂಡಿದ್ದು, ವರ್ಷದ ಕೊನೆಯಲ್ಲಿ ₹79 ಕೋಟಿಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯು ಬಾಕಿ ಉಳಿದಿದೆ.

2011–12ರಲ್ಲಿ ₹444 ಕೋಟಿಗಳ ಮೊತ್ತವು ಸಾರ್ವಜನಿಕ ಲೆಕ್ಕದಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ನಿಯುಕ್ತ ಆಡಳಿತಾಧಿಕಾರಿಗಳು ನಿರ್ವಹಿಸುವ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಚಿತ ನಿಧಿಯಿಂದ ವರ್ಗಾಯಿಸಲ್ಪಟ್ಟಿದೆ. ಸಾಧಾರಣವಾಗಿ ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿದೆ. ವರ್ಷದ ಕೊನೆಯಲ್ಲಿ ₹1,427 ಕೋಟಿಗಳ ಮೊತ್ತವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದಿತ್ತು.

## 1.4 ನಿಧಿಗಳ ಆಕರ ಮತ್ತು ಅನ್ವಯಗಳು

### 1.4.1 ಅರ್ಥೋಪಾಯ ಮುಂಗಡಗಳು

ಇವು ಕೇವಲ ತಾತ್ಕಾಲಿಕ ಸ್ವರೂಪದ ಮುಂಗಡಗಳು. ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತ ಕಡಿಮೆಯಾದಾಗ ಆ ಕೊರತೆಯನ್ನು ತುಂಬಲು ಈ ಮುಂಗಡವನ್ನು ಪಡೆಯಲಾಗುತ್ತದೆ. ಗರಿಷ್ಠ ಮುಂಗಡವನ್ನು ಪಡೆದ ನಂತರವೂ ಸರ್ಕಾರದ ಶಿಲ್ಕು ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆಯಿದ್ದಲ್ಲಿ ಆ ಕೊರತೆಯನ್ನು ಹಾಗೆಯೇ ಬಿಡಲಾಗುತ್ತದೆ. ಸರ್ಕಾರದ ನಗದು ಶಿಲ್ಕು ಶೂನ್ಯದಿಂದ ಋಣಾತ್ಮಕವಾದಲ್ಲಿ, ಆ ಋಣಾತ್ಮಕ ನಗದು ಶಿಲ್ಕನ್ನು ಓವರ್ ಡ್ರಾಫ್ಟ್ ಸೌಲಭ್ಯದ ಮೂಲಕ ಭರಿಸಲಾಗುತ್ತದೆ. 2011–12ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ಅರ್ಥೋಪಾಯ ಮುಂಗಡ ಅಥವಾ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ.

### 1.4.2 ನಿಧಿಗಳ ಹರಿವಿನ ವಿವರಣೆ

ರಾಜ್ಯ ಸರ್ಕಾರವು ₹4,521* ಕೋಟಿಗಳ ರಾಜಸ್ವ ಹೆಚ್ಚಳ ಮತ್ತು ₹12,470 ಕೋಟಿಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ರಾ. ಒ. ಆಂ.ಉ)[1] 1.04% ಮತ್ತು 2.87% ರಷ್ಟಿತ್ತು. ವಿತ್ತೀಯ ಕೊರತೆಯು ಒಟ್ಟು ವೆಚ್ಚದ 15.13%ರಷ್ಟಿತ್ತು. ಈ ಕೊರತೆಯನ್ನು ಸಾರ್ವಜನಿಕ ಋಣ (₹6,038 ಕೋಟಿ), ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಹೆಚ್ಚಳ (₹6,910 ಕೋಟಿ) ಸಾಧಿಲ್ವಾರು ನಿಧಿಯ ಕೊಡುಗೆ (₹12 ಕೋಟಿ) ಮತ್ತು ಆರಂಭಿಕ ಮತ್ತು ಅಂತಿಮ ಶಿಲ್ಕುಗಳ ನಿವ್ವಳ (₹ –660 ಕೋಟಿ) ಗಳಿಂದ ಭರಿಸಲಾಗಿತ್ತು. ಸುಮಾರು 70.04%ರಷ್ಟು ರಾಜಸ್ವ ಸ್ವೀಕೃತಿಗಳನ್ನು (₹69,806 ಕೋಟಿ) ಬದ್ಧ ವೆಚ್ಚಗಳಾದ ಸಂಬಳ[2] (₹6,068ಕೋಟಿ), ಸಬ್ಸಿಡಿಗಳು[2] (₹7390 ಕೋಟಿ), ಸಹಾಯಾನುದಾನ[2] (₹19,686 ಕೋಟಿ), ಬಡ್ಡಿಪಾವತಿ (₹ 6,604 ಕೋಟಿ), ನಿವೃತ್ತಿ ವೇತನ (₹5,436 ಕೋಟಿ), ಪರಿಹಾರ ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಯೋಜನೆ (₹4,248 ಕೋಟಿ), ಇವುಗಳಿಗೆ ಖರ್ಚುಮಾಡಿದೆ.

(*) ಪ್ಯಾರ : 1.3.1 ಅಡಿಯಲ್ಲಿರುವ (*) ಟಿಪ್ಪಣಿಯನ್ನು ನೋಡಿ.

(1) ಅನ್ಯಥಾ ಸೂಚನೆಯ ಹೊರತು, ಈ ಪುಸ್ತಕದಲ್ಲಿ ಬಳಸಲಾಗಿರುವ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂಕಗಳನ್ನು ಮಾರ್ಚ್ 2012 ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಿದ 'ಮಧ್ಯಂತರ ವಿತ್ತೀಯ ಯೋಜನೆ–2012–16' ರಿಂದ ತೆಗೆದುಕೊಳ್ಳಲಾಗಿದೆ (ರಾ.ಒ.ಆಂ.ಉ.–2011–12 ₹434,270 ಕೋಟಿ)

(2) ಸಂಬಳ ಸಬ್ಸಿಡಿಗಳು ಮತ್ತು ಸಹಾಯಾನುದಾನಗಳು ಎಲ್ಲಾ ವಿಭಾಗಗಳಿಂದ ಸಂಕಲಿತವಾಗಿದೆ ಮತ್ತು ಸಂಬಳ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ನೀಡಿದ ಅನುದಾನಗಳನ್ನು ಒಳಗೊಂಡಿರುವುದಿಲ್ಲ.

# ನಿಧಿಗಳ ಆಕರಗಳು ಮತ್ತು ಅನ್ವಯಗಳು

₹ ಕೋಟಿಗಳಲ್ಲಿ

| | ವಿವರಗಳು | ಮೊತ್ತ |
|---|---|---|
| ಆಕರಗಳು | 1.4.2011 ರಲ್ಲಿದ್ದಂತೆ ಆರಂಭಿಕ ಶಿಲ್ಕು | (-)657 |
| | ರಾಜಸ್ವ ಸ್ವೀಕೃತಿಗಳು | 69,806 |
| | ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ | 330 |
| | ಸಾರ್ವಜನಿಕ ಋಣ | 9,358 |
| | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಮತ್ತು ಇತರೆ | 3,361 |
| | ಮೀಸಲು ನಿಧಿಗಳು ಮತ್ತು ಋಣ ಪರಿಹಾರ ನಿಧಿಗಳು | 3,298 |
| | ಸ್ವೀಕೃತ ಠೇವಣಿಗಳು | 27,060 |
| | ಸಿವಿಲ್ ಮುಂಗಡಗಳ ಮರು ಪಾವತಿ | 2 |
| | ಅಮಾನತ್ತು ಲೆಕ್ಕ | 180,846 |
| | ಇರಸಾಲುಗಳು | 412 |
| | ಸಾದಿಲ್ವಾರು ನಿಧಿ | (-)1 |
| | **ಒಟ್ಟು** | **293,815** |
| ಅನ್ವಯ | ರಾಜಸ್ವ ವೆಚ್ಚ | 65,115 |
| | ಬಂಡವಾಳ ವೆಚ್ಚ | 15,506 |
| | ಸಾಲ ನೀಡಿಕೆ | 1,815 |
| | ಸಾರ್ವಜನಿಕ ಋಣ ಮರುಪಾವತಿ | 3,320 |
| | ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮತ್ತು ಇತರೆ | 1,963 |
| | ಮೀಸಲು ನಿಧಿ ಮತ್ತು ಋಣ ಪರಿಹಾರ ನಿಧಿಗಳು | 1,055 |
| | ಠೇವಣಿಗಳ ಮರುಪಾವತಿ | 25,652 |
| | ಸಾಧಿಲ್ವಾರು ನಿಧಿ | (-)13 |
| | ಅಮಾನತ್ತು ಲೆಕ್ಕ | 178,976 |
| | ಇರಸಾಲುಗಳು | 423 |
| | ಅಂತಿಮ ಶಿಲ್ಕು 31.3.2012 ರಲ್ಲಿದ್ದಂತೆ | 3 |
| | **ಒಟ್ಟು** | **293,815** |

## 1.4.3 ರೂಪಾಯಿ ಎಲ್ಲಿಂದ ಬಂತು




1. ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ಮರು ಪಾವತಿ, 1 ಪೈಸೆಗಿಂತ ಕಡಿಮೆ ಇರುವುದರಿಂದ, ಇಲ್ಲಿ ಪ್ರಸ್ತಾಪಿಸಿಲ್ಲ.
2. ಸಾರ್ವಜನಿಕ ಲೆಕ್ಕ, ನಿವ್ವಳ ಸ್ವೀಕೃತಿಗಳನ್ನು ಬಿಂಬಿಸುತ್ತದೆ.

## 1.4.4 ರೂಪಾಯಿ ಎಲ್ಲಿಗೆ ಹೋಯಿತು



## 1.5 ಲೆಕ್ಕಗಳ ಮುಖ್ಯಾಂಶಗಳು

| ಕ್ರ. ಸಂ. | ವಿವರಗಳು | ಅಂದಾಜು 2011–12 | ವಾಸ್ತವಿಕ | ವಾಸ್ತವಿಕ ಹಾಗೂ ಅಂದಾಜುಗಳ ಶೇಕಡವಾರು | ವಾಸ್ತವಿಕ ಹಾಗೂ ರಾ.ಒ.ಆಂ.ಉ*ದ ಶೇಕಡವಾರು* |
|---|---|---|---|---|---|
| | | (₹ ಕೋಟಿ) | | | |
| 01. | ತೆರಿಗೆ ರಾಜಸ್ವ | 54,236 (@) | 57,551 (&) | 106.11 | 13.25 |
| 02. | ತೆರಿಗೆಯೇತರ ರಾಜಸ್ವ | 3,675 | 4,087 ** | 111.21 | 0.94 |
| 03. | ಸಹಾಯಾನುದಾನಗಳು ಮತ್ತು ವಂತಿಗೆಗಳು | 8,402 | 8,168 | 97.21 | 1.88 |
| **04.** | **ರಾಜಸ್ವ ಜಮೆಗಳು (1+2+3)** | **66,313** | **69,806 **** | **105.27** | **16.07** |
| 05. | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 62 | 241 | 388.71 | 0.06 |
| 06. | ಇತರೆ ಜಮೆಗಳು ಇತರ ಬಂಡವಾಳ ಜಮೆಗಳು | 2000 | 89 | 4.45 | 0.02 |
| 07. | ಋಣ ಮತ್ತು ಇತರೆ ಜವಾಬ್ದಾರಿಗಳು | 12,482 (#) | 12,470 ($) | 99.90 | 2.87 |
| **08.** | **ಬಂಡವಾಳ ಜಮೆಗಳು (5+6+7)** | **14,544** | **12,630** | **86.84** | **2.91** |
| **09.** | **ಒಟ್ಟಾರೆ ಜಮೆಗಳು (4+8)** | **80,857** | **82,436** | **101.95** | **18.98** |
| **10.** | **ಯೋಜನೇತರ ವೆಚ್ಚ (11+13)** | **46,213** | **47,216** | **102.17** | **10.87** |
| 11. | ರಾಜಸ್ವ ಲೆಕ್ಕ– ಯೋಜನೇತರ ವೆಚ್ಚ | 45,438 | 46,548 | 102.44 | 10.72 |
| 12. | 11ರಮೊತ್ತದಲ್ಲಿ ಬಡ್ಡಿ ಪಾವತಿ ಯೋಜನೇತರ ವೆಚ್ಚ | 6,950 | 6,604 (^) | 87.22 (^) | 1.40 (^) |
| 13. | ಬಂಡವಾಳ ಲೆಕ್ಕ–ಯೋಜನೇತರ ವೆಚ್ಚ | 775 | 668 | 86.19 | 0.15 |
| **14.** | **ಯೋಜನಾ ವೆಚ್ಚ (15+16)** | **34,644** | **35,220** | **101.66** | **8.11** |
| 15. | ರಾಜಸ್ವ ಲೆಕ್ಕ– ಯೋಜನಾ ವೆಚ್ಚ | 19,596 | 18,567 | 94.75 | 4.28 |
| 16. | ಬಂಡವಾಳ ವೆಚ್ಚ–ಯೋಜನಾ ವೆಚ್ಚ | 15,048 | 16,653 | 110.66 | 3.85 |
| **17.** | **ಒಟ್ಟಾರೆ ವೆಚ್ಚ {(10+14) = (18+19)}** | **80,857** | **82,436** | **101.95** | **18.98** |
| 18. | ರಾಜಸ್ವ ವೆಚ್ಚ (11+15) | 65,034 | 65,115 | 100.12 | 14.99 |
| 19. | ಬಂಡವಾಳ ವೆಚ್ಚ (13+16) | 15,823 (a) | 17,321 (b) | 109.47 | 3.99 |
| **20.** | **ರಾಜಸ್ವ ಹೆಚ್ಚಳ (4–18)** | **1,279** | **4,521 **** | **353.48** | **1.04** |
| **21.** | **ವಿತ್ತೀಯ ಕೊರತೆ {(17) – (4+5+6) = 7}** | **12,482** | **12,470 **** | **99.90** | **2.87** |

(*) 2011–12ನೇ ವರ್ಷದ ರಾ.ಒ.ಆಂ.ಉ : ₹434,270 ಕೋಟಿ (ಆಕರ : ಕರ್ನಾಟಕ ಸರ್ಕಾರವು ಮಾರ್ಚ್ 2012ರಲ್ಲಿ ವಿಧಾನ ಮಂಡಲದಲ್ಲಿ ಮಂಡಿಸಿದ ಮಧ್ಯಂತರ ವಿತ್ತೀಯ ಯೋಜನೆ 2012–16)

(#) (i) ಸಾರ್ವಜನಿಕ ಋಣ (₹10,891 ಕೋಟಿ) (ii) ಸಾರ್ವಜನಿಕ ಲೆಕ್ಕ (₹1,885 ಕೋಟಿ) ಮತ್ತು (iii) ನಗದು ಶಿಲ್ಕು {(–) ₹294 ಕೋಟಿ}. ಇವುಗಳ ನಿವ್ವಳವಾಗಿರುತ್ತದೆ.

($) (i) ಸಾರ್ವಜನಿಕ ಋಣ (₹6,038ಕೋಟಿ) (ii) ಸಾದಿಲ್ವಾರು ನಿಧಿ (₹12ಕೋಟಿ) (iii) ಸಾರ್ವಜನಿಕ ಲೆಕ್ಕ (₹6910ಕೋಟಿ) ಮತ್ತು (iv) ನಗದು ಶಿಲ್ಕು (₹ (–)1660 ಕೋಟಿ)ಗಳ ನಿವ್ವಳ ಒಳಗೊಂಡಿರುತ್ತದೆ.

(a) ಬಂಡವಾಳ ವೆಚ್ಚ ₹13,754 ಕೋಟಿ ಮತ್ತು ಸಾಲಗಳು ಮತ್ತು ಮುಂಗಡಗಳು (₹2068 ಕೋಟಿ) ಇವುಗಳ ಅಂದಾಜನ್ನು ಒಳಗೊಂಡಿರುತ್ತದೆ. ₹ 1 ಕೋಟಿಯ ವ್ಯತ್ಯಾಸ ಪೂರ್ಣಮಾಡಿರುವುದರಿಂದ ಆಗಿದೆ.

(b) ಬಂಡವಾಳ ವೆಚ್ಚ (₹15,506ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳು (₹1,815ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ.

(@) ₹10,419ಕೋಟಿ ರಾಜ್ಯದ ಪಾಲಿನ ಕೇಂದ್ರಿಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ.

(&) ₹11,075 ಕೋಟಿ ರಾಜ್ಯದ ಪಾಲಿನ ಕೇಂದ್ರಿಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ.

** ಪ್ಯಾರ 1.3.1 ಅಡಿಯಲ್ಲಿ ನೀಡಿರುವ (*) ಟಿಪ್ಪಣಿಯನ್ನು ನೋಡಿ.

(^) ಬಡ್ಡಿ ಪಾವತಿಗಳಲ್ಲಿ ₹ 542ಕೋಟಿ ಆಯವ್ಯಯದಿಂದ ಹೊರುತು ಪಡಿಸಿದ ಸಾಲಗಳು ಸೇರಿಕೊಂಡಿದೆ.

## 1.6 ಕೊರತೆ ಮತ್ತು ಹೆಚ್ಚಳಗಳು ಏನನ್ನು ಸೂಚಿಸುತ್ತದೆ ?

| | |
|---|---|
| ಕೊರತೆ | ಆದಾಯ ಮತ್ತು ವೆಚ್ಚಗಳ ನಡುವಿನ ಅಂತರಕ್ಕೆ ಸಂಬಂಧಿಸಿದೆ. ಕೊರತೆಯ ವಿಧ, ಕೊರತೆಯನ್ನು ಹೇಗೆ ನಿಭಾಯಿಸಲಾಗಿದೆ ಮತ್ತು ನಿಧಿಗಳ ಬಳಕೆಯು ಹಣಕಾಸು ನಿರ್ವಹಣೆಯಲ್ಲಿನ ವಿವೇಚನೆಯ ಸೂಚಕಗಳಾಗಿವೆ. |
| ರಾಜಸ್ವ ಕೊರತೆ / ಹೆಚ್ಚಳ | ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಸೂಚಿಸುತ್ತದೆ. ಅಸ್ತಿತ್ವದಲ್ಲಿರುವ ಸರ್ಕಾರದ ಸಂಸ್ಥೆಗಳ ನಿರ್ವಹಣೆಗೆ ರಾಜಸ್ವ ವೆಚ್ಚದ ಅಗತ್ಯವಿದ್ದು, ವಾಸ್ತವದಲ್ಲಿ ಇದನ್ನು ರಾಜಸ್ವ ಸ್ವೀಕೃತಿಗಳಲ್ಲಿಯೇ ಪೂರ್ಣವಾಗಿ ಭರಿಸಬೇಕು. |
| ವಿತ್ತೀಯ ಕೊರತೆ / ಹೆಚ್ಚಳ | ಒಟ್ಟು ಸ್ವೀಕೃತಿಗಳು ಸಾಲಗಳ (ಸ್ವೀಕೃತಿಗಳು/ ಮರುಪಾವತಿಗಳನ್ನು ಹೊರತುಪಡಿಸಿ) ಮತ್ತು ಒಟ್ಟು ವೆಚ್ಚಗಳ ನಡುವಿನ ಅಂತರವನ್ನು ಸೂಚಿಸುತ್ತದೆ. ಹಾಗಾಗಿ ಈ ಅಂತರವು ಸಾಲಗಳ ಮೂಲಕ ಭರಿಸಲ್ಪಟ್ಟ ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಲಗಳ ಮೂಲಕ ಪಡೆದ ಮೊತ್ತವನ್ನು ಬಂಡವಾಳ ಯೋಜನೆಗಳಲ್ಲಿ ಹೂಡಬೇಕಾಗಿರುತ್ತದೆ. |

ಕೊರತೆ ಸೂಚಕಗಳು, ಆದಾಯದ ವೃದ್ಧಿ ಮತ್ತು ವೆಚ್ಚ ನಿರ್ವಹಣೆಗಳು ಸರ್ಕಾರದ ವಿತ್ತ ನಿರ್ವಹಣೆಯ ಮಾಪನಕ್ಕೆ ಪ್ರಮುಖ ಮಾನದಂಡಗಳಾಗಿವೆ. 11ನೇ ಹಣಕಾಸು ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ. ವಿತ್ತೀಯ ಜವಾಬ್ದಾರಿ ಅಧಿನಿಯಮ 2002ನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿ ಕರ್ನಾಟಕ ಸರ್ಕಾರವು 1ನೇ ಏಪ್ರಿಲ್ 2002 ರಿಂದ 31ನೇ ಮಾರ್ಚ್ 2003ರ ಆರ್ಥಿಕ ವರ್ಷದಿಂದ ಆರಂಭಿಸಿ ನಾಲ್ಕು ಆರ್ಥಿಕ ವರ್ಷಗಳೊಳಗೆ ರಾಜಸ್ವ ಕೊರತೆಯನ್ನು ತೊಡೆದು ಹಾಕುವ ಬದ್ಧತೆಯನ್ನು ಸೂಚಿಸಿತ್ತು. ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳವನ್ನು 2004–05ರಲ್ಲಿಯೇ ಸಾಧಿಸುವಲ್ಲಿ ಯಶಸ್ವಿಯಾಗಿ ಅದನ್ನು ಮುಂದುವರೆಸಿಕೊಂಡು ಬಂದಿದೆ. 12ನೇ ವಿತ್ತ ಆಯೋಗವು ರಾಜ್ಯಗಳು 2008–09ರ ವೇಳೆಗೆ ರಾಜಸ್ವ ಶಿಲ್ಕನ್ನು ಸಾಧಿಸುವುದರೊಂದಿಗೆ 2009–10ರ ವೇಳೆಗೆ ವಿತ್ತೀಯ ಕೊರತೆಯ ಮೊತ್ತವನ್ನು ರಾ.ಒ.ಆಂ.ಉ. ದ ಶೇಕಡ 3ರಷ್ಟಕ್ಕೆ ಇಳಿಸುವಂತೆ ಶಿಫಾರಸ್ಸು ಮಾಡಿತ್ತು. ಆರ್ಥಿಕ ಕುಸಿತದಿಂದಾಗಿ ಭಾರತ ಸರ್ಕಾರವು ವಿತ್ತೀಯ ಕೊರತೆ ರಾ.ಒ.ಆಂ.ಉ.ದ ಅನುಪಾತವನ್ನು 2008–09ನೇ ಸಾಲಿಗೆ ಶೇಕಡ 3.5 ಮತ್ತು 2009–10ನೇ ಸಾಲಿಗೆ ಶೇಕಡ 4ಕ್ಕೆ ಏರಿಸಿ ರಾಜಸ್ವ ಶಿಲ್ಕಿನ ಮಿತಿಯನ್ನು ಮತ್ತಷ್ಟು ಸಡಿಲಗೊಳಿಸಿತು. 13ನೇ ವಿತ್ತ ಆಯೋಗದ ಶಿಫಾರಸ್ಸು ಮತ್ತು ವಿತ್ತೀಯ ಜವಾಬ್ದಾರಿ ಅಧಿನಿಯಮದ ತಿದ್ದುಪಡಿ (ಮೇ 2011) ರ ಅನ್ವಯ ರಾಜ್ಯ ಸರ್ಕಾರವು 1) ಬಾಕಿ ಇರುವ ಸಾಲ ಮೊತ್ತವು 2015–16ರ ಅಂತ್ಯಕ್ಕೆ ಅಂದಾಜಿನಿಂದ ರಾ.ಒ.ಆಂ.ಉದ ಶೇಕಡ 25.20 ರಷ್ಟಕ್ಕೆ ಇಳಿಯಬೇಕು. ಬಾಕಿ ಸಾಲವು 31.3.2012ರ ಅಂತ್ಯಕ್ಕೆ ಶೇಕಡ 26ರಷ್ಟಿರಬೇಕು. 2) 2011–12ರಲ್ಲಿ ವಿತ್ತೀಯ ಕೊರತೆಯು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 3.00ಕ್ಕಿಂತ ಹೆಚ್ಚಾಗಬಾರದೆಂಬ ವಿತ್ತೀಯ ಗುರಿಗಳನ್ನು ಇಟ್ಟುಕೊಂಡಿತ್ತು. 2011–12 ಸಾಲಿನ ಅಂತ್ಯಕ್ಕೆ ಬಾಕಿ ಇದ್ದ ಸಾಲ ಅಂದಾಜಿಸಿದ ರಾ.ಒ.ಆಂ.ಉ.ದ ಶೇಕಡ 23.72ರಷ್ಟು ಮತ್ತು ವಿತ್ತೀಯ ಕೊರತೆಯು ಶೇಕಡ 2.87 ರಷ್ಟು ಇದ್ದಿತು. ಇದರಲ್ಲಿ (₹ 170ಕೋಟಿ) ಕೇಂದ್ರ ಪುರಸ್ಕೃತ ಯೋಜನೆಗಳು / ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ ನೀಡಿರುವ ಕೇಂದ್ರ ಸಾಲಗಳ ಬಾಕಿ ಮೊತ್ತ ಹಣಕಾಸು ಸಚಿವಾಲಯವನ್ನು ಹೊರತುಪಡಿಸಿ ಇತರೆ ಕೇಂದ್ರಿಯ ಸಚಿವಾಲಯಗಳು 13ನೇ ಹಣಕಾಸು ಆಯೋಗದ ಶಿಪಾರಸ್ಸಿಗೆ ಅನುಗುಣವಾಗಿ, ಮನ್ನಾ ಮಾಡಿದ ಸಾಲ ಹೊರತುಪಡಿಸಲಾಗಿದೆ.

## 1.6.1 ರಾಜಸ್ವ ಹೆಚ್ಚಳ / ಕೊರತೆಯ ಪ್ರವೃತ್ತಿ

ರಾಜಸ್ವ ಹೆಚ್ಚಳವು ಸರ್ಕಾರದ ರಾಜಸ್ವ ಸ್ವೀಕೃತಿಗಳು ರಾಜಸ್ವ ವೆಚ್ಚಕ್ಕಿಂತ ನಿವ್ವಳ ಅಧಿಕ್ಯವನ್ನು ಸೂಚಿಸುತ್ತದೆ.

(₹ ಕೋಟಿಗಳಲ್ಲಿ)

| | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ರಾಜಸ್ವ ಹೆಚ್ಚಳ | 3,776 | 1,631 | 1,619 | 4,172 | 4,521* |
| ರಾ. ಒ. ಆಂ ಉ. | 270,628 | 310,312 | 345,235 | 398,893 | 434,270 |
| ರಾ.ಆಂಉ.ದ ಶತಾಂಶವಾಗಿ ರಾ.ಹೆಚ್ಚಳ | 1.39 | 0.52 | 0.47 | 1.05 | 1.04 |




## 1.6.2 ವಿತ್ತೀಯ ಕೊರತೆಯ ಪ್ರವೃತ್ತಿ

ವಿತ್ತೀಯ ಕೊರತೆಯನ್ನು ಒಟ್ಟು ವೆಚ್ಚ (ರಾಜಸ್ವ+ಬಂಡವಾಳ+ನಿವ್ವಳ ಸಾಲ ಮತ್ತು ಮುಂಗಡಗಳು)ದಲ್ಲಿ ರಾಜಸ್ವ ಸ್ವೀಕೃತಿಗಳು ಮತ್ತು ಇತರೆ ಬಂಡವಾಳ ಸ್ವೀಕೃತಿಗಳನ್ನು ಕಳೆದು ಲೆಕ್ಕ ಮಾಡಲಾಗುತ್ತದೆ.

(₹ ಕೋಟಿಗಳಲ್ಲಿ)

| | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ವಿತ್ತೀಯ ಕೊರತೆ | 5,332 | 8,732 | 10,875 | 10,688 | 12,470* |
| ರಾ. ಒ. ಆಂ ಉ. | 270,628 | 310,312 | 345,235 | 398,893 | 434,270 |
| ರಾ.ಒ.ಆಂ.ಉ.ದ ಶತಾಂಶವಾಗಿ ವಿತ್ತೀಯ ಕೊರತೆ | 1.97 | 2.81 | 3.15 | 2.68 | 2.87 |

(*) ಪ್ಯಾರ 1.3.1ರ ಅಡಿಯಲ್ಲಿ ನೀಡಿರುವ (*) ಟಿಪ್ಪಣಿಯನ್ನು ನೋಡತಕ್ಕದ್ದು.




## 1.6.3 ಸರ್ಕಾರದ ಲೆಕ್ಕಪತ್ರಗಳು

ಆಯಾ ವರ್ಷದ ಒಟ್ಟು ವೆಚ್ಚಕ್ಕೂ (ರಾಜಸ್ವ ಮತ್ತು ಬಂಡವಾಳ ವೆಚ್ಚಗಳೆರಡೂ ಸೇರಿ) ವರ್ಷದ ಒಟ್ಟು ಆದಾಯಕ್ಕೂ (ರಾಜಸ್ವ ಮತ್ತು ಋಣ ಹೊರತು ಪಡಿಸಿದ ಬಂಡವಾಳ ಆದಾಯಗಳು) ಇರುವ ಹೆಚ್ಚಳ / ಕೊರತೆಯ ವ್ಯತ್ಯಾಸವನ್ನು 'ಸರ್ಕಾರದ ಲೆಕ್ಕ' ಎಂದು ಕರೆಯಲಾಗುವ ಪ್ರತ್ಯೇಕ ಖಾತೆಗೆ ವರ್ಗಾಯಿಸಲಾಗುವುದು.

ಜೊತೆಗೆ, ಹಿಂದಿನ ವರ್ಷದ ಲೆಕ್ಕಗಳ ಹೊಂದಾಣಿಕೆ ಮತ್ತು ಇತರ ಸರ್ಕಾರಿ ಲೆಕ್ಕಗಳ ನಿವ್ವಳ ಪರಿಣಾಮದ ಅಂಶಗಳನ್ನು ಈ ಖಾತೆಗೆ ವರ್ಗಾಯಿಸಲಾಗುವುದು.

ಹೀಗೆ 'ಸರ್ಕಾರಿ ಲೆಕ್ಕ'ದಲ್ಲಿ ವರ್ಷಾನುವರ್ಷ ಸರ್ಕಾರದ ವ್ಯವಹಾರಗಳಿಂದುಂಟಾದ ಆರ್ಥಿಕ ಹೆಚ್ಚಳ/ಕೊರತೆಗಳ ಸಂಚಿತ ಪರಿಣಾಮವು ಲಭ್ಯವಾಗುತ್ತದೆ. ಹಿಂದಿನ ಐದು ವರ್ಷಗಳ "ಸರ್ಕಾರ ಲೆಕ್ಕ"ಗಳ ವಿವರಗಳು ಈ ಕೆಳಗಿನಂತಿವೆ.

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ಶೀರ್ಷಿಕೆ | | | ಬಂಡವಾಳ ಶೀರ್ಷಿಕೆ | | | ಇತರೆ ಶೀರ್ಷಿಕೆ (#) ಹೆಚ್ಚಳ(+) ಕೊರತೆ(−) | ಸದರಿ ಸಾಲಿನ ಕೊರತೆ(−) | ಸಂಚಿತ ಹೆಚ್ಚಳ(+) ಕೊರತೆ(−) |
|---|---|---|---|---|---|---|---|---|---|
| | ಜಮೆ | ಬಟವಾಡೆ | ಹೆಚ್ಚಳ(+) ಕೊರತೆ(−) | ಜಮೆ | ಬಟವಾಡೆ | ಹೆಚ್ಚಳ(+) ಕೊರತೆ(−) | | | |
| 2007-08 | 41,151 | 37,375 | (+) 3,776 | 246 | 8,649 | (-) 8,403 | (+) 100 | (-) 4,527 | (-) 52,434 |
| 2008-09 | 43,290 | 41,659 | (+) 1,631 | 181 | 9,870 | (-) 9,689 | (+) 66 | (-) 7,992 | (-) 60,426 |
| 2009-10 | 49,156 | 47,537 | (+) 1,619 | 70 | 12,137 | (-) 12,067 | (+) 64 | (-) 10,384 | (-) 70,810 |
| 2010-11 | 58,206 | 54,034 | (+) 4,172 | 72 | 13,355 | (-) 13,283 | (+) 55 | (-) 9,056 | (-) 79,866 |
| 2011-12 | 69,806 | 65,115 | (+)4,521* | 89 | 15,506 | (-)15,417 | (+)55 | (-)10,841 | (-) 90,767 |

(#) ಇತರೆ ಸರ್ಕಾರದ ಲೆಕ್ಕ
(*) ಪ್ಯಾರ 1.3.1ರ ಅಡಿಯಲ್ಲಿ ನೀಡಿರುವ (*) ಟಿಪ್ಪಣಿಯನ್ನು ನೋಡತಕ್ಕದ್ದು.

## 1.6.4 ಸಾಲದ ಮೊತ್ತದಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ

ಸಾಲವಾಗಿ ಪಡೆದ ಮೊತ್ತವನ್ನು ಪೂರ್ಣವಾಗಿ ಬಂಡವಾಳ ಆಸ್ತಿ ನಿರ್ಮಾಣಕ್ಕೆ ಬಳಸಿ ರಾಜಸ್ವ ಸ್ವೀಕೃತಿಗಳನ್ನು ಬಡ್ಡಿಪಾವತಿಗೆ ಉಪಯೋಗಿಸುವುದು ಸೂಕ್ತ. ಆದರೆ, ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ ಸಾಲದ ಮೊತ್ತವನ್ನು ಸಂಪೂರ್ಣವಾಗಿ (₹9,358 ಕೋಟಿ) ಬಂಡವಾಳ ವೆಚ್ಚಕ್ಕೆ (ಸಾಲ ಮತ್ತು ಮುಂಗಡಗಳ ವಿತರಣೆಯಲ್ಲಿ ಸೇರಿದಂತೆ (₹17,321 ಕೋಟಿ) ಖರ್ಚು ಮಾಡಲಾಗಿದೆ.

## *ಅಧ್ಯಾಯ – 2*

# ಸ್ವೀಕೃತಿಗಳು

### 2.1 ಪೀಠಿಕೆ

ಸರ್ಕಾರದ ಸ್ವೀಕೃತಿಗಳನ್ನು ರಾಜಸ್ವ ಸ್ವೀಕೃತಿಗಳು ಮತ್ತು ಬಂಡವಾಳ ಸ್ವೀಕೃತಿಗಳು ಎಂದು ವರ್ಗೀಕರಿಸಲಾಗಿದೆ. 2011–12ನೇ ಸಾಲಿನ ಒಟ್ಟು ಸ್ವೀಕೃತಿಗಳು ₹82,436 ಕೋಟಿಗಳಷ್ಟಿದ್ದು, ಇದು ತೆರಿಗೆ ರಾಜಸ್ವ (₹57,551 ಕೋಟಿ) ತೆರಿಗೆಯೇತರ ರಾಜಸ್ವ (₹4,087 ಕೋಟಿ) ಸಹಾಯಾನುದಾನ ಮತ್ತು ವಂತಿಗೆಗಳು (₹8,168 ಕೋಟಿ) ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ (₹241ಕೋಟಿ) ಒಳಗೊಂಡಂತೆ ಇತರೆ ಬಂಡವಾಳ ಸ್ವೀಕೃತಿಗಳು (₹12,630 ಕೋಟಿ). ಇತರೆ ಬಂಡವಾಳ ಸ್ವೀಕೃತಿ (₹89 ಕೋಟಿ) ಮತ್ತು (1)ಈ– ಸಾರ್ವಜನಿಕ ಋಣ (₹6,038 ಕೋಟಿ) 2)ಸಾದಿಲ್ವಾರು ನಿಧಿ (₹12 ಕೋಟಿ), (3) ಸಾರ್ವಜನಿಕ ಲೆಕ್ಕ (₹6,910 ಕೋಟಿ) ಮತ್ತು (4) ನಗದು ಶಿಲ್ಕು (₹(-)660 ಕೋಟಿ)ಗಳ ವಹಿವಾಟಿನ ನಿವ್ವಳ ಕೊಡುಗೆಯನ್ನು ಒಳಗೊಂಡ ಸಾಲಗಳು ಮತ್ತು ಇತರೆ ಜವಾಬ್ದಾರಿಗಳು ಸೇರಿವೆ.

### 2.2 ರಾಜಸ್ವ ಸ್ವೀಕೃತಿಗಳು

| | |
|---|---|
| ತೆರಿಗೆ ರಾಜಸ್ವ | ಇದು ರಾಜ್ಯ ಸರ್ಕಾರವು ಸಂಗ್ರಹಿಸಿ ಉಳಿಸಿಕೊಂಡ ತೆರಿಗೆಗಳು ಮತ್ತು ಸುಂಕಗಳು ಮತ್ತು ಸಂವಿಧಾನದ ಅನುಚ್ಛೇದ 280(3)ರ ಅನ್ವಯ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿದೆ. |
| ತೆರಿಗೆಯೇತರ ರಾಜಸ್ವ | ಇದರಲ್ಲಿ ಬಡ್ಡಿ ಸ್ವೀಕೃತಿ ಲಾಭಾಂಶಗಳು ಮತ್ತು ಲಾಭಗಳು ಮತ್ತು ಇತರ ಇಲಾಖಾ ಸ್ವೀಕೃತಿಗಳು ಸೇರಿವೆ. |
| ಸಹಾಯಾನುದಾನಗಳು ಮತ್ತು ವಂತಿಗೆಗಳು | ಇದು ರಾಜ್ಯ ಸರ್ಕಾರಕ್ಕೆ ಕೇಂದ್ರ ನೀಡಿದ ಸಹಾಯವಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಮೂಲಕ ವಿದೇಶ ಸರ್ಕಾರಗಳಿಂದ ಪಡೆದ ಬಾಹ್ಯ ಅನುದಾನ ಸಹಾಯ ಮತ್ತು ಸಹಾಯ ಸಾಮಗ್ರಿಗಳು ಮತ್ತು ಸಾಧನಗಳು ಸೇರಿವೆ. |



### 2.2.1 ರಾಜಸ್ವ ಸ್ವೀಕೃತಿಗಳ ಭಾಗಗಳು

(₹ ಕೋಟಿಗಳಲ್ಲಿ)

| ಭಾಗಗಳು | ವಾಸ್ತವಿಕ | ಒಟ್ಟು ರಾಜಸ್ವ ಜಮೆಗೆ ಶೇಕಡವಾರು |
|---|---|---|
| **ಅ. ತೆರಿಗೆ ರಾಜಸ್ವ*** | **57,551** | **82** |
| ವರಮಾನ ಮತ್ತು ವೆಚ್ಚದ ಮೇಲಣ ತೆರಿಗೆಗಳು | 7,189 | 10 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಣ ತೆರಿಗೆಗಳು | 4,855 | 7 |
| ಸರಕು ಮತ್ತು ಸೇವೆಗಳ ಮೇಲಣ ತೆರಿಗೆ | 45,507 | 65 |
| **ಬ. ತೆರಿಗೆಯೇತರ ರಾಜಸ್ವ** | **4,087** | **6** |
| ಬಡ್ಡಿ ಜಮೆಗಳು, ಲಾಭ ಮತ್ತು ಲಾಭಾಂಶಗಳು | 495 | 1 |
| ಸಾಮಾನ್ಯ ಸೇವೆಗಳು | 634 | 1 |
| ಸಾಮಾಜಿಕ ಸೇವೆಗಳು | 382 | - |
| ಆರ್ಥಿಕ ಸೇವೆಗಳು | 2,576 | 4 |
| **ಕ. ಸಹಾಯಾನುದಾನಗಳು ಮತ್ತು ವಂತಿಗೆಗಳು** | **8,168** | **12** |
| **ಒಟ್ಟು ರಾಜಸ್ವ ಜಮೆಗಳು** | **69,806** | **100** |

*ಕೇಂದ್ರ ಸರ್ಕಾರದಿಂದ ಪಡೆದ ವಿವಿಧ ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು ₹11,075 ಕೋಟಿಗಳನ್ನು ಒಳಗೊಂಡಿದೆ.

ಒಟ್ಟು ತೆರಿಗೆ ಆದಾಯ ₹57,551 ಕೋಟಿ ಮತ್ತು ತೆರಿಗೆಯೇತರ ಆದಾಯ ₹4,087 ಕೋಟಿ ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 13.25 ಮತ್ತು ಶೇಕಡ 0.94 ರಷ್ಟಿವೆ. (2011–12ನೇ ವರ್ಷದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ : ₹434,270 ಕೋಟಿ.)

### 2.2.2 ಆದಾಯದ ಪ್ರಮುಖ ಮೂಲಗಳು

| ಲೆಕ್ಕ ಶೀರ್ಷಿಕೆ | (₹ಕೋಟಿಗಳಲ್ಲಿ) | |
|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಣ ತೆರಿಗೆಗಳು | 25,020 | (5.76) |
| ರಾಜ್ಯ ಅಬಕಾರಿ | 9,775 | (2.25) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 4,623 | (1.06) |
| ನಿಗಮ ತೆರಿಗೆ | 4,359 | (1.00) |
| ವಾಹನ ತೆರಿಗೆಗಳು | 2,957 | (0.68) |
| ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 2,214 | (0.51) |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 1,690 | (0.39) |
| ಸೀಮಾ ಸುಂಕ | 1,920 | (0.44) |
| ಕೇಂದ್ರ ಅಬಕಾರಿ ಸುಂಕ | 1,243 | (0.29) |
| ಸೇವಾ ತೆರಿಗೆ | 1,322 | (0.30) |

(*ಆದಾಯದ ಮೊತ್ತವನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶತಾಂಶವಾಗಿ ಆವರಣದಲ್ಲಿ ತೋರಿಸಿದೆ. 2011–12ನೇ ವರ್ಷದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ : ₹ 434,270 ಕೋಟಿ)

ಪ್ರಸಕ್ತ ಸಾಲಿನಲ್ಲಿ ನಿವ್ವಳ ತೆರಿಗೆ ಸ್ವೀಕೃತಿಗಳು ಆಯವ್ಯಯ ಅಂದಾಜುಗಳಿಗಿಂತಲೂ ₹3,315 ಕೋಟಿಗಳಷ್ಟು ಹೆಚ್ಚಿದೆ. ವ್ಯತ್ಯಾಸವಿರುವ ಪ್ರಮುಖ ಬಾಬುಗಳು ಈ ಕೆಳಕಂಡಂತೆ ಇವೆ.

(₹ ಕೋಟಿಗಳಲ್ಲಿ)

| ಆಯವ್ಯಯ ಅಂದಾಜುಗಳಿಗಿಂತ ಕಡಿಮೆ ಇರುವ ವಾಸ್ತವಗಳು | | ಆಯವ್ಯಯ ಅಂದಾಜುಗಳಿಗಿಂತ ಹೆಚ್ಚಳವಿರುವ ವಾಸ್ತವಗಳು | |
|---|---|---|---|
| ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 53 | ನಿಗಮ ತೆರಿಗೆ | 161 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 127 | ಸೀಮಾ ಸುಂಕ | 275 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 150 | ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಣ ತೆರಿಗೆಗಳು | 700 |
| ಸೇವಾ ತೆರಿಗೆಗಳು | 82 | | |

## 2.3 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

(₹ ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ತೆರಿಗೆಯೇತರ ರಾಜಸ್ವ | ಸಹಾಯಾನುದಾನಗಳು ಮತ್ತು ವಂತಿಗೆಗಳು | ಒಟ್ಟು ರಾಜಸ್ವ ಸ್ವೀಕೃತಿ | ರಾ.ಒ. ಆಂ.ಉ* | ರಾ.ಒ.ಆಂ.ಉ ದ ಮೇಲೆ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶ |
|---|---|---|---|---|---|---|
| 2007-08 | 32,766 | 3,358 | 5,027 | 41,151 | 270,628 | 15.21 |
| 2008-09 | 34,799 | 3,159 | 5,332 | 43,290 | 310,312 | 13.95 |
| 2009-10 | 37,939 | 3,334 | 7,883 | 49,156 | 345,235 | 14.24 |
| 2010-11 | 47,979 | 3,358 | 6,869 | 58,206 | 398,893 | 14.59 |
| 2011-12 | 57,551 | 4,087 | 8,168 | 69,806 | 434,270 | 16.07 |

ರಾ.ಒ.ಆಂ.ಉ. 2011–12 ಸಾಲಿಗೆ ₹ 434,270 ಕೋಟಿ ಆಕರ : ಕರ್ನಾಟಕ ಸರ್ಕಾರವು ಮಾರ್ಚ್ 2012 ರಲ್ಲಿ, ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಿದ, ಮಧ್ಯಂತರ ವಿತ್ತೀಯ ಯೋಜನೆ 2012–16






## 2.3.1 ತೆರಿಗೆ ರಾಜಸ್ವದ ಭಾಗಗಳು

(₹ ಕೋಟಿಗಳಲ್ಲಿ)

| ತೆರಿಗೆ ರಾಜಸ್ವ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 4,050 | 4,367 | 5,252 | 6,238 | 7,189 |
| ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು | 3,556 | 3,184 | 2,763 | 3,716 | 4,855 |
| ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗಳು | 25,160 | 27,248 | 29,924 | 38,025 | 45,507 |
| **ಒಟ್ಟು ರಾಜಸ್ವ ತೆರಿಗೆ** | **32,766** | **34,799** | **37,939** | **47,979** | **57,551** |




## 2.4 ರಾಜ್ಯದ ಸ್ವಂತ ತೆರಿಗೆಯ ಸಂಗ್ರಹದ ನಿರ್ವಹಣೆ

(₹ ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾ.ಒ.ಆಂ.ಉ* | ರಾಜ್ಯದ ಸ್ವಂತ ತೆರಿಗೆ ರಾಜಸ್ವ | |
|---|---|---|---|---|---|
| | | | | ಮೊತ್ತ | ರಾ.ಒ.ಆಂ.ಉ. ಶತಾಂಶ |
| **2007-08** | 32,766 | 6,779 | 270,628 | 25,987 | 9.60 |
| **2008-09** | 34,799 | 7,154 | 310,312 | 27,645 | 8.91 |
| **2009-10** | 37,939 | 7,360 | 345,235 | 30,579 | 8.86 |
| **2010-11** | 47,979 | 9,506 | 398,893 | 38,473 | 9.64 |
| **2011-12** | 57,551 | 11,075 | 434,270 | 46,476 | 10.70 |

* {ಆಕರ : ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯ ವಿಧಾನ ಮಂಡಲದಲ್ಲಿ ಮಾರ್ಚ್ 2012ರಲ್ಲಿ ಮಂಡಿಸಿದ ಮಧ್ಯಂತರ ಅವಧಿಯ ವಿತ್ತೀಯ ಯೋಜನೆ 2012–16.}

## 2.5 ತೆರಿಗೆ ಸಂಗ್ರಹದ ದಕ್ಷತೆ

### ಎ. ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು*

| ವಿವರ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ರಾಜಸ್ವ ಸಂಗ್ರಹ | 3,554 | 3,182 | 2,756 | 3,708 | 4,838 |
| ಸಂಗ್ರಹದ ಮೇಲಿನ ವೆಚ್ಚ | 172 | 165 | 196 | 215 | 250 |
| ತೆರಿಗೆ ಸಂಗ್ರಹದ ದಕ್ಷತೆ | 4.84% | 5.19% | 7.11% | 5.80% | 5.17% |

* ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಯಲ್ಲಿ, ರಾಜ್ಯದ ತೆರಿಗೆಯ ಭಾಗವಲ್ಲದ ಆಸ್ತಿಯ ಮೇಲಿನ ತೆರಿಗೆಯನ್ನು ಹೊರತು ಪಡಿಸಿದೆ.

ಬಿ. ವಸ್ತು ಮತ್ತು ಸೇವಾ ತೆರಿಗೆ

(₹ ಕೋಟಿಗಳಲ್ಲಿ)

| ವಿವರ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ರಾಜಸ್ವ ಸಂಗ್ರಹ | 25,160 | 27,248 | 29,924 | 38,025 | 45,507 |
| ಸಂಗ್ರಹದ ಮೇಲಿನ ವೆಚ್ಚ | 157 | 182 | 190 | 211 | 240 |
| ತೆರಿಗೆ ಸಂಗ್ರಹದ ದಕ್ಷತೆ | 0.62% | 0.67% | 0.63% | 0.55% | 0.53% |

## 2.6 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಪ್ರಧಾನ ಶೀರ್ಷಿಕೆ ವಿವರ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ನಿಗಮ ತೆರಿಗೆ | 2,152 | 2,346 | 3,029 | 3,716 | 4,359 |
| ನಿಗಮ ತೆರಿಗೆ ಹೊರತಾದ ವರಮಾನದ ಮೇಲಿನ ತೆರಿಗೆ | 1,444 | 1,473 | 1,687 | 1,963 | 2,214 |
| ಐಶ್ವರ್ಯ ತೆರಿಗೆ | 2 | 2 | 7 | 8 | 17 |
| ಸೀಮಾ ಸುಂಕ | 1,281 | 1,367 | 1,030 | 1,662 | 1,920 |
| ಕೇಂದ್ರ ಅಬಕಾರಿ ಸುಂಕ | 1,223 | 1,193 | 830 | 1,209 | 1,243 |
| ಸೇವಾ ತೆರಿಗೆ | 677 | 773 | 777 | 948 | 1,322 |
| ಸುಂಕಗಳ ಮತ್ತು ಸೇವೆಗಳ ಮೇಲಿನ ಸುಂಕ ಮತ್ತು ಇತರ ತೆರಿಗೆಗಳು | * | * | * | * | * |
| **ರಾಜ್ಯ ಪಾಲಿನ ಕೇಂದ್ರ ತೆರಿಗೆ ಮತ್ತು ಸುಂಕಗಳು** | **6,779** | **7,154** | **7,360** | **9,506** | **11,075** |
| **ಒಟ್ಟು ತೆರಿಗೆ ರಾಜಸ್ವ** | **32,766** | **34,799** | **37,939** | **47,979** | **57,551** |
| **ತೆರಿಗೆ ರಾಜಸ್ವಕ್ಕೆ ಕೇಂದ್ರ ತೆರಿಗೆ ಮತ್ತು ಸುಂಕಗಳ ಶತಾಂಶ** | **20.69** | **20.56** | **19.40** | **19.81** | **19.24** |

*ಒಂದು ಕೋಟಿಗಿಂತಲೂ ಕಡಿಮೆ ಮೊತ್ತಗಳನ್ನು ಮತ್ತು ಶೀರ್ಷಿಕೆಯಡಿ ಸ್ವೀಕೃತಿಯಾದ ಮೊತ್ತಕ್ಕಿಂತ ಸಂಗ್ರಹದ ವೆಚ್ಚ ಅಧಿಕವಾಗಿರುವುದರಿಂದ ಋಣಾತ್ಮಕ ಅಂಕಿಯಾಗಿ ಸೂಚಿತವಾಗಿರುವ ಮೊತ್ತಗಳನ್ನು (ಭಾರತ ಸರ್ಕಾರದ ವಿತ್ತ ಸಚಿವಾಲಯದ ಮಂಜೂರಾತಿ ಆದೇಶದಲ್ಲಿ ಸೂಚಿಸಿರುವಂತೆ) ತೋರುತ್ತದೆ.

## 2.7 ಸಹಾಯಾನುದಾನ ಮತ್ತು ವಂತಿಗೆಗಳು

ಸಹಾಯಾನುದಾನ ಮತ್ತು ವಂತಿಗೆಗಳು ಕೇಂದ್ರ ಸರ್ಕಾರದಿಂದ ಬಂದ ಸಹಾಯವನ್ನು ಸೂಚಿಸುತ್ತದೆ ಮತ್ತು ಇದು ಯೋಜನಾ ಅಯೋಗ ಅನುಮೋದಿಸಿದ ರಾಜ್ಯ ಯೋಜನಾ ಕಾರ್ಯಕ್ರಮಗಳು, ಕೇಂದ್ರ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಮತ್ತು ಹಣಕಾಸು ಆಯೋಗ ಶಿಫಾರಸ್ಸು ಮಾಡಿದ ರಾಜ್ಯ ಯೋಜನೇತರ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ಸಹಾಯಾನುದಾನ ಮತ್ತು ವಂತಿಗೆಯಡಿಯಲ್ಲಿನ ಒಟ್ಟು ಸ್ವೀಕೃತಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| **ಸಹಾಯಾನುದಾನ ಮತ್ತು ವಂತಿಗೆಗಳ ಭಾಗಗಳು** | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ಯೋಜನೇತರ ಅನುದಾನಗಳು | 1,531 | 1,694 | 3,429 | 2,257 | 2,129 |
| ರಾಜ್ಯ ಯೋಜನೆಗಳಿಗೆ ಅನುದಾನ | 1,916 | 2,020 | 2,973 | 2,839 | 3,626 |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 71 | 94 | 61 | 145 | 76 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 1,509 | 1,524 | 1,420 | 1,628 | 2,337 |
| **ಒಟ್ಟು** | **5,027** | **5,332** | **7,883** | **6,869** | **8,168** |




ಒಟ್ಟು ಸಹಾಯಾನುದಾನ ಮತ್ತು ವಂತಿಗೆಗಳಲ್ಲಿ ಯೋಜನೇತರ ಅನುದಾನದ ಪಾಲು 2010–11 ರಲ್ಲಿದ್ದ ಶೇಕಡ 33ರಿಂದ 2011–12ರಲ್ಲಿ ಶೇಕಡ 26ಕ್ಕೆ ಇಳಿದಿದ್ದರೆ, ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುದಾನದ ಪಾಲು 2010–11ರಲ್ಲಿದ್ದ ಶೇಕಡ 41 ರಿಂದ 2011–12ರಲ್ಲಿ ಶೇಕಡ 44ಕ್ಕೆ ಹೆಚ್ಚಿತ್ತು. ಯೋಜನಾ ಕಾರ್ಯಕ್ರಮಗಳಿಗೆ ಕೇಂದ್ರದ ಪಾಲು ಆಯವ್ಯಯದ ಅಂದಾಜಿನ ₹6,320 ಕೋಟಿಗಳಿಗೆ ಪ್ರತಿಯಾಗಿ ವಾಸ್ತವವಾಗಿ ₹6,039 ಕೋಟಿಗಳ ಅನುದಾನವನ್ನು ಪಡೆಯಲಾಗಿದೆ (ಆಯವ್ಯಯ ಅಂದಾಜಿನ ಶೇಕಡ 96).

## 2.8 ಸಾರ್ವಜನಿಕ ಋಣ

ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಋಣದಡಿ ಸ್ವೀಕೃತಿಗಳ ಪ್ರವೃತ್ತಿಯನ್ನು ಕೆಳಗೆ ಸೂಚಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ರಾಜ್ಯದ ಆಂತರಿಕ ಋಣ | 1,551 | 7,996 | 7,310 | 5,210 | 8,091 |
| ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | 806 | 596 | 681 | 1,504 | 1,267 |
| **ಒಟ್ಟು ಸಾರ್ವಜನಿಕ ಋಣ** | **2,357** | **8,592** | **7,991** | **6,714** | **9,358** |

ಪ್ರಸಕ್ತ 2011–12 ಸಾಲಿನಲ್ಲಿ ಸರ್ಕಾರವು ₹7500 ಕೋಟಿಗಳಷ್ಟು ಮಾರುಕಟ್ಟೆ ಸಾಲಗಳನ್ನು ಪಡೆದಿದೆ. ಇದರಲ್ಲಿ ₹1500 ಕೋಟಿ (ನವಂಬರ್ 2011) ಶೇ. 9.19 ಬಡ್ಡಿದರದಲ್ಲಿ – 2021ರಲ್ಲಿ ವಿಮೋಚನೆಗೊಳ್ಳುವ, ₹1250 ಕೋಟಿ (ಜನವರಿ 2012) ಶೇ. 8.69 ಬಡ್ಡಿದರದಲ್ಲಿ, ₹1250 ಕೋಟಿ (ಜನವರಿ 2012) ಶೇ. 8.65 ಬಡ್ಡಿದರದಲ್ಲಿ, ₹1500 ಕೋಟಿ (ಫೆಬ್ರವರಿ 2012) ಶೇ. 8.69 ಬಡ್ಡಿದರದಲ್ಲಿ, ₹500 ಕೋಟಿ (ಫೆಬ್ರವರಿ 2012) ಶೇ. 8.74 ಬಡ್ಡಿದರದಲ್ಲಿ, ₹1500 ಕೋಟಿ (ಮಾರ್ಚ್ 2012) ಶೇ. 8.92 ಬಡ್ಡಿದರದಲ್ಲಿ – 2022 ರಲ್ಲಿ ವಿಮೋಚನೆಗೊಳ್ಳುವ ಸಾಲಗಳು ಸೇರಿಕೊಂಡಿವೆ.

2011–12ರಲ್ಲಿ ರಾಜ್ಯ ಸರ್ಕಾರದ ₹8,091 ಕೋಟಿಯ ಆಂತರಿಕ ಋಣ ಮತ್ತು ಈ ಅವಧಿಯಲ್ಲಿ ಪಡೆದ ₹1,267 ಕೋಟಿಗಳ ಕೇಂದ್ರ ಸಾಲದ ಭಾಗಕ್ಕೆ ಪ್ರತಿಯಾಗಿ ಬಂಡವಾಳ ವೆಚ್ಚವು ₹17,321 ಕೋಟಿಯಷ್ಟಿತ್ತು (ಇದರಲ್ಲಿ ₹3,320 ಕೋಟಿ ಮೊತ್ತದ ಸಾರ್ವಜನಿಕ ಋಣದ ಮರುಪಾವತಿ ಸೇರಿಲ್ಲ).

# ಅಧ್ಯಾಯ–3

## ವೆಚ್ಚಗಳು

### 3.1 ಪೀಠಿಕೆ

ವೆಚ್ಚಗಳನ್ನು ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವನ್ನು ರಾಜ್ಯ ಸರ್ಕಾರದ ಇಲಾಖೆಗಳ ದಿನನಿತ್ಯದ ನಿರ್ವಹಣೆಗೆ ಮಾಡಲಾಗುತ್ತದೆ. ಬಂಡವಾಳ ವೆಚ್ಚವನ್ನು ಶಾಶ್ವತ ಆಸ್ತಿ ನಿರ್ಮಾಣ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಹೆಚ್ಚಿಸಲು ಅಥವಾ ಶಾಶ್ವತ ಜವಾಬ್ದಾರಿಗಳನ್ನು ಕಡಿಮೆಯಾಗಿಸಲು ಮಾಡಲಾಗುತ್ತದೆ. ವೆಚ್ಚವನ್ನು ಯೋಜನೆ ಮತ್ತು ಯೋಜನೇತರ ಎಂದೂ ವರ್ಗೀಕರಿಸಲಾಗಿದೆ.

| | |
|---|---|
| ಸಾಮಾನ್ಯ ಸೇವೆಗಳು | ನ್ಯಾಯಾಂಗ, ಪೊಲೀಸ್, ಬಂದೀಖಾನೆ, ಲೋಕೋಪಯೋಗಿ, ನಿವೃತ್ತಿ ವೇತನ ಮುಂತಾದವುಗಳು ಸೇರಿವೆ. |
| ಸಾಮಾಜಿಕ ಸೇವೆಗಳು | ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು, ಪ.ಜಾ/ಪ.ವರ್ಗಗಳ ಕಲ್ಯಾಣ ಮುಂತಾದವುಗಳನ್ನು ಒಳಗೊಂಡಿದೆ. |
| ಆರ್ಥಿಕ ಸೇವೆಗಳು | ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ ಕೈಗಾರಿಕೆಗಳು, ಸಾರಿಗೆ ಮುಂತಾದವುಗಳನ್ನು ಒಳಗೊಂಡಿದೆ. |

### 3.2 ರಾಜಸ್ವ ವೆಚ್ಚ

2011–12ನೇ ಸಾಲಿನ ₹65,115 ಕೋಟಿಗಳ ರಾಜಸ್ವ ವೆಚ್ಚವು ಆಯವ್ಯಯ ಅಂದಾಜಿಗಿಂತಲೂ ₹81 ಕೋಟಿಗಳಷ್ಟು ಹೆಚ್ಚಾಗಿದೆ. ಈ ಹೆಚ್ಚಳವು ಯೋಜನಾ ವೆಚ್ಚದಲ್ಲಿ ₹1,029 ಕೋಟಿಗಳ ಇಳಿತ ಮತ್ತು ಯೋಜನೇತರ ವೆಚ್ಚದಲ್ಲಿ ₹1,110 ಕೋಟಿಗಳ ಹೆಚ್ಚಳದಿಂದ ಉಂಟಾಗಿದೆ. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಅಂದಾಜಿಗೆ ಪ್ರತಿಯಾಗಿ ರಾಜಸ್ವ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2007-08 | 2008-09 | 2009-10 | 2010-11 | 2011-12 |
|---|---|---|---|---|---|
| ಆಯವ್ಯಯ ಅಂದಾಜುಗಳು | 39,135 | 45,713 | 47,238 | 53,138 | 65,034 |
| ವಾಸ್ತವ ವೆಚ್ಚ | 37,375 | 41,659 | 47,537 | 54,034 | 65,115 |
| ಅಂತರ | 1,760 | 4,054 | (-) 299 | (-) 896 | (-) 81 |
| ಆಯವ್ಯಯಕ್ಕೆ ಅಂತರ | 4% | 9% | (-) 1% | (-) 2% | (-) 1% |

#### 3.2.1 ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ – 2011–12

(₹ ಕೋಟಿಗಳಲ್ಲಿ)

| ಭಾಗಗಳು | ಮೊತ್ತ | ಶತಾಂಶ |
|---|---|---|
| **A. ಸಾಮಾನ್ಯ ಸೇವೆಗಳು (*)** | **16,445** | **25.26*** |
| a. ರಾಜ್ಯದ ಅಂಗಗಳು | 656 | 1.00 |
| b. ವಿತ್ತೀಯ ಸೇವೆಗಳು | 638 | 1.00 |
| (I) ವರಮಾನದ ಮೇಲಿನ ತೆರಿಗೆಗಳ ಸಂಗ್ರಹ | 5 | … |
| (ii) ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆ ಸಂಗ್ರಹ | 264 | … |
